(ಇಂದು ದಿನಾಂಕ 03-01-2020 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿ ನಂ.1 ಮತ್ತು 2 ರವರ ಪರ ಶ್ರೀ ಎಸ್.ಯು.ಎ. ವಕೀಲರಿಂದ–**

**5.** ಮೇ 1973 ರಲ್ಲಿ ನನ್ನ ಮದುವೆ ಆಗಿರುತ್ತದೆ. ವಾದಿ ನಂ.2 ರವಳ ಮದುವೆ ನನ್ನ ಮದುವೆಗಿಂತ ಸುಮಾರು 8 –10 ವರ್ಷಗಳ ಹಿಂದೆ ಆಗಿರಬಹುದು. ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಭೂನ್ಯಾಯಮಂಡಳಿಗೆ ನಾನು ಮತ್ತು ವಾದಿ ನಂ.1 ರವರ ಮಗ ಜಯಂತ

ಓಡಾಟ ನಡೆಸಿರುತ್ತೇವೆ. ಸದ್ರಿ ಜಯಂತನಿಗೆ ಸುಮಾರು 42 ವರ್ಷ ವಯಸ್ಸಾಗಿರಬಹುದು. ಸಾಕ್ಷಿ ಮುಂದುವರೆದು ಭೂನ್ಯಾಯಮಂಡಳಿಗೆ ಸಂಬಂಧಿಸಿದಂತೆ ನಾನು ಓಡಾಟ ನಡೆಸಿಲ್ಲ ಎನ್ನುತ್ತಾರೆ. ನಾನು ಈ ಪ್ರಕರಣದಲ್ಲಿ ವಾದಿ ನಂ.2 ಮತ್ತು 3 ರವರ ಪರ ಮಾತ್ರ ಸಾಕ್ಷ್ಯ ನುಡಿಯುತ್ತಿದ್ದೇನೆ. ನಾನು ಈಗ ನಿ.ಡಿ.1- ಭೂನ್ಯಾಯಮಂಡಳಿಯ ತೀರ್ಪನ್ನು ಓದಿಕೊಂಡು ಬಂದಿರುತ್ತೇನೆ. ನಿ.ಡಿ.1 ರ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿಲ್ಲ ,ಸಾಕ್ಷಿ ಮುಂದುವರೆದು ಕುಟುಂಬದ ಸೌಹಾರ್ದತೆ ದೃಷ್ಟಿಯಿಂದ ಮತ್ತು ಭೂನ್ಯಾಯಮಂಡಳಿಯ ವಾಂಟಣಿ ಆಗುವುದಿಲ್ಲ ಎಂದು ಮೇಲ್ಮನವಿ ಸಲ್ಲಿಸಿಲ್ಲ ಎನ್ನುತ್ತಾರೆ.

6. ಭೂನ್ಯಾಯಮಂಡಳಿಯಲ್ಲಿ ನಾಗಪ್ಪ ಪಟಗಾರ ಸಲ್ಲಿಸಿದ ಅರ್ಜಿಯನ್ನು ಮಾತ್ರ ನಾನು ನೋಡಿರುತ್ತೇನೆ. ಸದ್ರಿ ಅರ್ಜಿಯ ನಕಲು ನನ್ನ ಮನೆಯಲ್ಲಿದೆ. ನಾಗಪ್ಪ, 1 ನೇ ವಾದಿ, ಪ್ರತಿವಾದಿ ನಂ.1 ಮತ್ತು 2 ರವರು ಜಂಟಿಯಾಗಿ ಭೂನ್ಯಾಯಮಂಡಳಿಗೆ ಹೇಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿ ನಿ.ಡಿ.1 ರಲ್ಲಿ ಆ ರೀತಿ ಬರೆದಿದೆ ಎನ್ನುತ್ತಾರೆ . ನಾನು ಈ ಬಗ್ಗೆ 1 ನೇ ವಾದಿಯನ್ನು ವಿಚಾರಿಸಿರುತ್ತೇನೆ. ದಾವಾ 'ಅ' ಪರಿಶಿಷ್ಟ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ.

7. ವಾದಪತ್ರದ ನಕಾಶೆಯನ್ನು ನನ್ನ ಕಲ್ಪನೆಯಂತೆ ತಯಾರಿಸಲಾಗಿದೆ ಎಂದರೆ ಸರಿಯಲ್ಲ . ಮೂಲ ನಕಾಶೆಯಲ್ಲಿ ಕೈ ನಕಾಶೆಯಲ್ಲಿ ತೋರಿಸಿದ ದಾರಿ ನಮೂದು ಇರುವುದಿಲ್ಲ. ರಾಮಯ್ಯ ಪಟಗಾರನ ಕುಟುಂಬದವರೆಲ್ಲರೂ ಪ್ರತ್ ಪ್ರತ್ಯೇಕವಾಗಿ ವಾಸ್ತವ್ಯ ಇದ್ದಾರೆ ಮತ್ತು ಪ್ರತ್ಯೇಕ ಅಡುಗೆ ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿ ನಂ. 2 ಮತ್ತು 3 ರವರಿಗೆ ದಾವಾಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ನಾನು ಒಪ್ಪವುದಿಲ್ಲ. ಪ್ರತಿವಾದಿ ನಂ.1 ಹೊಸದಾಗಿ ಮನೆ ಕಟ್ಟಿಕೊಳ್ಳುವುದನ್ನು ಸಹಿಸದೇ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ದಾವಾಸ್ತಿಗಳು ನಮ್ಮ ವಹಿವಾಟಿನಂತೆ

ಪ್ರತ್ ಪ್ರತ್ಯೇಕವಾಗಿ ಮಂಜೂರಾದ ಆಸ್ತಿಗಳು ಎಂದರೆ ಸರಿಯಲ್ಲ . ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ನಂ . 3 ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಕಂಡುಬರದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ